# ಕನ್ನಡದಲ್ಲಿ ರಾಮಕೃಷ್ಣ-ವಿವೇಕಾನಂದ ಸಾಹಿತ್ಯಕ್ಕೆ ಸೇವೆ ಸಲ್ಲಿಸಿದ ಯತಿಗಳು

**ಡಾ. ಇ. ವಸಂತ ಕುಮಾರ್**


ಕನ್ನಡದಲ್ಲಿ ದಿವ್ಯತ್ರಯರ ಹಾಗೂ ವೇದಾಂತ ಸಾಹಿತ್ಯಕ್ಕೆ ರಾಮಕೃಷ್ಣ ಆಶ್ರಮದ ಸಂನ್ಯಾಸಿಗಳು ಸಲ್ಲಿಸಿದ ಸೇವೆ ಅಸಾಧರಣ ವಾದುದು. ಅವರಲ್ಲಿ ಹಲವರನ್ನು ಹತ್ತಿರದಿಂದ ತಿಳಿದಿದ್ದ ಲೇಖಕರು, ಆ ಕುರಿತು ವಿಸ್ತಾರವಾಗಿ ಇಲ್ಲಿ ಬರೆದಿದ್ದಾರೆ. ಅವರು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಸಂಖ್ಯಾಶಾಸ್ತ್ರದ ಪ್ರಾಧ್ಯಾಪಕರಾಗಿದ್ದು ನಿವೃತ್ತರಾಗಿದ್ದಾರೆ. ಶ್ರೀರಾಮಕೃಷ್ಣ ಆಶ್ರಮದ ಭಕ್ತರಾಗಿರುವ ಅವರು 'ವಿವೇಕಪ್ರಭ'ದಲ್ಲಿ ಅನೇಕ ಲೇಖನಗಳನ್ನು ಬರೆದಿದ್ದಾರೆ.

ಭಗವಂತ ಕಾಲಕಾಲಕ್ಕೆ ಧರೆಯಲ್ಲಿ ಅವತರಿಸಿದಾಗ ಹೊಸ ಭಾವನೆಗಳು ಮಾನವರ ಮನಸ್ಸಿನಲ್ಲಿ ಗೋಚರಿಸಿ, ಸ್ವಚ್ಛಂದವಾಗಿ ವಿಹಂಗಮದಂತೆ ಹೃನ್ಮನಗಳಲ್ಲಿ ವಿಹರಿಸಿ ಭಾವಪ್ರವಾಹ ಅಭಿ ವ್ಯಕ್ತವಾಗುವಂತೆ ಮಾಡುವನು. ಭಕ್ತಿ-ಜ್ಞಾನ-ವೈರಾಗ್ಯ-ಕರ್ಮ ಗಳ ಪ್ರವಾಹದಂತೆ ಸಾಹಿತ್ಯ ಪ್ರವಾಹವೂ ಹರಿಯುವುದು. ರಾಮಕೃಷ್ಣ-ವಿವೇಕಾನಂದ ವೇದಾಂತ ಸಾಹಿತ್ಯ-ತ್ರಿವೇಣಿಯಲ್ಲಿ ಶಾರದಾದೇವಿಯವರ ಗುಪ್ತಗಾಮಿನಿ ಸರಸ್ವತಿಯೂ ಮಂದ ಗಾಮಿನಿಯಾಗಿ ಹರಿಯುತ್ತಿರುವಳು. ವಿಸ್ತಾರವಾದ ರಾಮ ಕೃಷ್ಣ-ವಿವೇಕಾನಂದ ಸಾಹಿತ್ಯದ ಅಧ್ಯಯನಕ್ಕೆ ಒಂದು ಜೀವಿ ತವೇ ಬೇಕಾಗುತ್ತದೆ. ಬಂಗಾಳಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಸಣ್ಣ ಝರಿಯಂತೆ ಪ್ರಾರಂಭವಾದ ಈ ಸಾಹಿತ್ಯ-ಪ್ರವಾಹ ನಮ್ಮ ದೇಶದ ಮತ್ತು ಪ್ರಪಂಚದ ಎಲ್ಲಾ ಭಾಷೆಗಳಲ್ಲಿಯೂ ಪ್ರವಹಿಸಿತು; ಮೈಸೂರಿನ ರಾಮಕೃಷ್ಣ ಆಶ್ರಮದಲ್ಲಿ ಅಂಕುರಿಸಿ ಕನ್ನಡನಾಡಿನಲ್ಲಿ ಪಸರಿಸಿತು.

### ಸ್ವಾಮಿ ಸೋಮನಾಥಾನಂದ


ಮೈಸೂರಿನ ರಾಮಕೃಷ್ಣಾಶ್ರಮದ ಬೆಳವಣಿಗೆ ಎರಡು ವ್ಯಕ್ತಿ ಗಳನ್ನು ಆಧರಿಸಿರುವುದು – ಸ್ವಾಮಿ ಶಾಂಭವಾನಂದರು ಮತ್ತು ಸ್ವಾಮಿ ಸೋಮನಾಥಾನಂದರು. ಶಾಂಭವಾನಂದರು ಸ್ವಾಮಿ ಬ್ರಹ್ಮಾನಂದರ ಶಿಷ್ಯರು. ಕೆಚ್ಚೆದೆಯುಳ್ಳವರು. ಪ್ರಚಂಡ ಇಚ್ಛಾ ಶಕ್ತಿ ಮತ್ತು ಕ್ರಿಯಾಶಕ್ತಿಗಳಿಂದ ಆಶ್ರಮದ ದೇವಸ್ಥಾನ, ರಾಮ ಕೃಷ್ಣ ವಿದ್ಯಾಶಾಲೆ, ಹಾಗೂ ವೇದಾಂತ ಕಾಲೇಜುಗಳನ್ನು ನಿರ್ಮಿಸಿದರು. ಸೋಮನಾಥಾನಂದರು ಶಾಂಭವಾನಂದರ ಕಾರ್ಯಗಳಲ್ಲಿ ನೆರವಾಗುವುದರ ಜತೆಗೆ ಕನ್ನಡದಲ್ಲಿ ರಾಮ ಕೃಷ್ಣ-ವಿವೇಕಾನಂದ ವೇದಾಂತ ಸಾಹಿತ್ಯದ ತರುಲತೆಯನ್ನು ನೆಟ್ಟು ಪೋಷಿಸಿದರು. ಇಬ್ಬರದೂ ಏಕಾಂಗಿ ಹೋರಾಟ. ಖಾಲಿ ಕೈಯಿಂದ ಪ್ರಾರಂಭಿಸಿದರು. ಸೋಮನಾಥಾನಂದರು ಮಹಾ ಪುರುಷಜಿ ಸ್ವಾಮಿ ಶಿವಾನಂದರ ಶಿಷ್ಯರು. ಹತ್ತೊಂಭತ್ತು ವರ್ಷ ದವರಾಗಿದ್ದಾಗಲೆ (೧೯೩೦-೩೧) ರಾಮಕೃಷ್ಣ ಮಠವನ್ನು ಮದ ರಾಸಿನಲ್ಲಿ ಸೇರಿದರು. ವಿದ್ಯಾರ್ಥಿಯಾಗಿದ್ದಾಗಲೆ ಇಂಗ್ಲಿಷ್ ಸಾಹಿತ್ಯ ಪ್ರಕಾರಗಳನ್ನೆಲ್ಲಾ ಓದಿ ಮುಗಿಸಿದ್ದರು. ಮದರಾಸಿನ ಆಶ್ರಮದಲ್ಲಿ ಪ್ರತಿ ವಾರ ಒಬ್ಬ ಬ್ರಹ್ಮಚಾರಿ ಇಂಗ್ಲಿಷ್‌ನಲ್ಲಿ ಮಾತ ನಾಡಬೇಕೆಂದು ವಿಧಿಸಲಾಗಿತ್ತು. ಇವರ ಭಾಷಣವನ್ನು ಕೇಳಿದ ಹಿರಿಯ ಸ್ವಾಮಿಗಳೊಬ್ಬರು ಇವರು ಪ್ರಖ್ಯಾತ ವಾಗ್ಮಿಗಳಾಗು ವರೆಂದು ಭವಿಷ್ಯ ನುಡಿದು ಪ್ರತಿ ವಾರ ಇವರೇ ಮಾತನಾಡು ವಂತೆ ಹೇಳಿದರಂತೆ.

**'ಶ್ರೀಶಾರದಾದೇವಿ' : ಪ್ರಕಾಶನದ ಪ್ರಾರಂಭ** : ಶಾಂಭವಾ ನಂದರ ದೇವಸ್ಥಾನದ ನಿರ್ಮಾಣ ಕಾರ್ಯಗಳು ಮತ್ತು ಸೋಮ ನಾಥಾನಂದರ ಸಾಹಿತ್ಯ ನಿರ್ಮಾಣ ಜತೆಜತೆಗೇ ಪೊನ್ನಂಪೇಟೆ ಯಲ್ಲಿ ಪ್ರಾರಂಭವಾದುದು ಸೋಜಿಗದ ಸಂಗತಿ. ಅಲ್ಲಿಯೇ ಬ್ರಹ್ಮಚಾರಿಗಳಾಗಿದ್ದ ಸೋಮನಾಥಾನಂದರ ಚೊಚ್ಚಲ ಕೃತಿ 'ಶ್ರೀಶಾರದಾದೇವಿ' ಎಂಬ ೧೭೦ ಪುಟಗಳ ಪುಸ್ತಕ ಬರೆಯಲ್ಪಟ್ಟುದು. ಹಣವಿಲ್ಲದ ಕಾರಣ ಹಸ್ತಪ್ರತಿ ಐದು ವರ್ಷಗಳ ಕಾಲ ಟ್ರಂಕಿನೊಳಗೆ ಇರಬೇಕಾಯಿತು. ನಂತರ ಇಬ್ಬರೂ ಮೈಸೂರು ಆಶ್ರಮಕ್ಕೆ ಬಂದರು. ಇಬ್ಬರ ಕಾರ್ಯಗಳೂ ಮುಂದುವರಿ ದುವು! ಕುವೆಂಪು ಅವರು 'ಶ್ರೀಶಾರದಾ ದೇವಿ' ಪುಸ್ತಕಕ್ಕೆ ಮುನ್ನುಡಿ ಬರೆದು ಕೊಟ್ಟರು, ಹಾಗೂ ಹಿಂದೂ ಸಂಸ್ಕೃತಿಯಲ್ಲಿ ಸ್ತ್ರೀಯರ ಸ್ಥಾನ ಎಂಬ ಅಧ್ಯಾಯವನ್ನು ಸೇರಿಸುವಂತೆ ಸೂಚಿಸಿದರು. ಪ್ರಖ್ಯಾತ ವೈದ್ಯರೂ ಸ್ವಾಮಿ ಸಿದ್ಧೇಶ್ವರಾನಂದರ ಆಪ್ತಮಿತ್ರರೂ ಆಗಿದ್ದ ಡಾ. ರಾಮಕೃಷ್ಣ ರಾಯರ ನೆರವಿನಿಂದ 'ಶ್ರೀಶಾರದಾದೇವಿ' ಪ್ರಕಟ ವಾಯಿತು. ಅದು ಮೈಸೂರಿನಲ್ಲಿ ಮನೆಮಾತಾಯಿತು. 'ತಮ್ಮ ಪತ್ನಿಯನ್ನೇ ಪೂಜಿಸಿದರಂತಲ್ಲಾ! ಎಂತಹ ಮಹಾಮಹಿಮರು ಈ ರಾಮಕೃಷ್ಣ ಪರಮಹಂಸರು' ಎಂದು ಆಶ್ರಮದ ಭಕ್ತರಲ್ಲ ದವರೂ ಉದ್ಗರಿಸುತ್ತಿದ್ದರು.



೧೯೫೦ರ ದಶಕದಲ್ಲಿಯೇ 'ಶ್ರೀಶಾರದಾದೇವಿ ಸಂಭಾಷಣೆ' ಮತ್ತು ಶ್ರೀರಾಮಕೃಷ್ಣರ ೧೧೨೧ ಬೋಧನೆ ಮತ್ತು ಕಥೆಗಳ ಸಂಗ್ರಹವನ್ನು ಅನುವಾದಿಸಿ, 'ಶ್ರೀರಾಮಕೃಷ್ಣ ಉಪದೇಶಾಮೃತ' ಎಂದು ಪ್ರಕಟಿಸಿದರು ಸೋಮನಾಥಾನಂದರು.

**ಸಂಕ್ಷಿಪ್ತ ಜೀವನಗಳು :** ಸಂಕ್ಷಿಪ್ತ ಜೀವನ ಎಂಬ ಕಿರು ಶೀರ್ಷಿಕೆಯಿದ್ದ ಶ್ರೀರಾಮಕೃಷ್ಣ, ವಿವೇಕಾನಂದ ಮತ್ತು ಶ್ರೀಶಾರದಾದೇವಿ ಎಂಬ ಕಿರು ಪುಸ್ತಕಗಳು ಜನಪ್ರಿಯವಾಗಿ ಬೇಗನೆ ಅನೇಕ ಮರುಮುದ್ರಣಗಳನ್ನು ಕಂಡವು. ಕುವೆಂಪು ಅವರು ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿದ್ದಾಗ (೧೯೫೬-೫೯) ಪ್ರಸಾರಾಂಗವೆಂಬ ಶಾಖೆಯನ್ನು ಪ್ರಾರಂಭಿಸಿ ವಿವಿಧ ಶಾಖೆಗಳ ಪ್ರಾಧ್ಯಾಪಕರಿಂದ ಅವರವರ ವಿಷಯಗಳ ಬಗ್ಗೆ ಕರ್ನಾಟಕದ ಊರುಗಳಲ್ಲಿ ಕನ್ನಡದಲ್ಲಿ ಪ್ರವಚನ ಏರ್ಪಡಿಸುತ್ತಿದ್ದರು. ನಂತರ ಅವನ್ನು ಬರೆದು ಕೊಡಬೇಕೆಂದು ಮೊದಲೇ ತಿಳಿಸಿರುತ್ತಿದ್ದರು. ಅವೆಲ್ಲವನ್ನೂ ಒಂದೊಂದಾಗಿ ಪ್ರಚಾರ ಪುಸ್ತಕಮಾಲೆಯ ಅಡಿಯಲ್ಲಿ ಪ್ರಕಾಶಿಸಿದರು. ಇದರಲ್ಲಿ ಸ್ವಾಮಿ ಸೋಮನಾಥಾನಂದರಿಂದ ಆರು ಪ್ರವಚನಗಳನ್ನು ಕೊಡಿಸಿ ಅವನ್ನು ಪ್ರಕಟಿಸಿದರು. ಅವೇ 'ಶ್ರೀರಾಮಕೃಷ್ಣ', 'ಶ್ರೀಶಾರದಾದೇವಿ', 'ಸ್ವಾಮಿ ವಿವೇಕಾನಂದ', 'ಭಗವದ್ಗೀತಾ ಸಂದೇಶ', 'ಉಪನಿಷತ್ ಪರಿಚಯ' ಮತ್ತು 'ಹಿಂದೂಧರ್ಮಸಾರ'.




**ರಾಮಕೃಷ್ಣ-ವಿವೇಕಾನಂದ-ಶಿಷ್ಯಕೋಟಿಗಳ ವಿಸ್ತೃತ ಜೀವನ**

೧೯೬೦ರ ದಶಕದಲ್ಲಿ 'ಭಗವಾನ್ ಶ್ರೀರಾಮಕೃಷ್ಣ' ಎಂಬ ೨೯೦ ಪುಟಗಳ ರಾಮಕೃಷ್ಣರ ಜೀವನ ಚರಿತ್ರೆಯನ್ನು ಸೋಮನಾಥಾನಂದರು ಬರೆದರು. ನಂತರ, ವಿಸ್ತಾರವಾದ ೬೧೨ ಪುಟಗಳ 'ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆ'ಯನ್ನೂ ಬರೆದರು: ಇಂದಿಗೂ ಇದು ಅತ್ಯಂತ ಹೆಚ್ಚು ಸಂಖ್ಯೆಯಲ್ಲಿ ಮುದ್ರಿತವಾಗುತ್ತಿದೆ. ಅದೇ ಕಾಲದಲ್ಲಿ 'ಶ್ರೀರಾಮಕೃಷ್ಣ ಶಿಷ್ಯಕೋಟಿ' ಎಂಬ ರಾಮಕೃಷ್ಣರ ಹದಿನೈದು ಸಂನ್ಯಾಸಿ ಶಿಷ್ಯರ (ವಿವೇಕಾನಂದರ ಹೊರತಾಗಿ) ಜೀವನ-ಪರಿಚಯದ ಪುಸ್ತಕವನ್ನು ಬರೆದರು. (ಈಗ ಇದರ ಶೀರ್ಷಿಕೆ 'ಶ್ರೀರಾಮಕೃಷ್ಣ ಶಿಷ್ಯವೃಂದ' ಎಂದಾಗಿದೆ). ಮಹಿಳಾಭಕ್ತರು ಮತ್ತು ಗೃಹಿಭಕ್ತರ ಜೀವನವೂ ಇದರಲ್ಲಿ ಸೇರಿರುವುದು ವಿಶೇಷ. ಪ್ರತಿಯೊಬ್ಬರ ಜೀವನ ಚರಿತ್ರೆಯೂ ನಾಟಕೀಯವಾಗಿ ಪ್ರಾರಂಭವಾಗಿ ಕುತೂಹಲಕಾರಿಯಾಗಿ ಓದಿಸಿಕೊಂಡು ಹೋಗುವುದು. ಸ್ವಾಮಿ ಗಂಭೀರಾನಂದರ ಇಂಗ್ಲಿಷ್ ಪುಸ್ತಕಕ್ಕಿಂತ ಮೊದಲೇ ಇದು ಪ್ರಕಟವಾಯಿತೆಂದು ತೋರುವುದು.

**ಅನುವಾದಗಳು: ರಾಮಕೃಷ್ಣರ ಶಿಷ್ಯರ ಬೋಧನೆಗಳು, ನಿವೇದಿತಾ :** ಸ್ವಾಮಿ ತುರೀಯಾನಂದರ ಮಾತುಕತೆ, 'ಸಾಧಕನ ಕೈದೀವಿಗೆ' ೧೯೫೭ರಲ್ಲೇ ಅನುವಾದವಾಗಿ ಪ್ರಕಟವಾಯಿತು. ಅದರಂತೆ, ಸ್ವಾಮಿ ಬ್ರಹ್ಮಾನಂದರ 'ಬ್ರಹ್ಮಾನಂದ ವಚನಸುಧೆ' ಹಾಗೂ ಅವರದೇ ಸಂಕಲನವಾದ 'ಗುರುದೇವರ ವಚನ' ಅನುವಾದವಾಗಿ ಪ್ರಕಟವಾದುವು. ಸ್ವಾಮಿ ಶಾರದಾನಂದರ 'ಭಾರತದಲ್ಲಿ ಶಕ್ತಿ ಪೂಜೆ', ಸ್ವಾಮಿ ರಾಮಕೃಷ್ಣಾನಂದರ 'ನೊಂದ ಜೀವಕ್ಕೆ ಭರವಸೆ', ಸ್ವಾಮಿ ಅಭೇದಾನಂದರ ಪ್ರಸಿದ್ಧ ಉಪನ್ಯಾಸ 'ಪುನರ್ಜನ್ಮ' ಅನುವಾದಿಸಲ್ಪಟ್ಟುವು.

ಸ್ವಾಮಿ ವಿರಜಾನಂದರ 'ಪರಮಾರ್ಥ ಪ್ರಸಂಗ', ಸ್ವಾಮಿ ಪರಮಾನಂದರ 'ಭಕ್ತಿಮಾರ್ಗ' ಮತ್ತು ಮಾಯಾವತಿ ಆಶ್ರಮದಲ್ಲಿ ಇದ್ದ ಎಫ್.ಜೆ. ಅಲೆಕ್ಸಾಂಡರ್ ಅವರ 'ಧ್ಯಾನಚಿಂತನ ಧಾರೆ' ಅನುವಾದವಾಗಿ ಪ್ರಕಟವಾದುವು.

'ನಗೆಗಾರ ರಾಮಕೃಷ್ಣ' ಎಂಬ ರಾಮಕೃಷ್ಣರ ಹಾಸ್ಯ ಪ್ರಸಂಗಗಳ ವಿನೂತನ ಸಂಗ್ರಹವೊಂದನ್ನು ಹೊರತಂದರು. ಕನ್ನಡದವರಲ್ಲದ ರಾಮಕೃಷ್ಣ ಸಂಘದ ಸ್ವಾಮಿಗಳು ಕುತೂಹಲದಿಂದ ಸೋಮನಾಥಾನಂದರಿಂದ ಅದನ್ನು ಓದಿಸಿ ಸಂತೋಷಪಟ್ಟು ತಮ್ಮ ಭಾಷೆಯಲ್ಲಿ ಇದನ್ನು ಪ್ರಕಟಿಸುವುದಾಗಿ ಹೇಳಿದರು.

ಸೋದರಿ ನಿವೇದಿತಾ ಸ್ವಾಮಿ ವಿವೇಕಾನಂದರ ವ್ಯಕ್ತಿತ್ವವನ್ನು ಚಿತ್ರಿಸಿರುವ 'ನಾ ಕಂಡಂತೆ ನನ್ನ ಗುರುದೇವ' ಪುಸ್ತಕವನ್ನು ೧೯೫೭ರಲ್ಲಿ ಸೋಮನಾಥಾನಂದರು ಅನುವಾದಿಸಿ ಪ್ರಕಟಿಸಿದರು. ನಿವೇದಿತಾ ಅವರ ಇಂಗ್ಲಿಷ್ ಶೈಲಿ ಪ್ರೌಢಿಮೆಯಿಂದ ಕೂಡಿದೆ; ಅನುವಾದಕರಿಗೆ ಸವಾಲಿನಂತಿದೆ. ಸೋಮನಾಥಾನಂದರ ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳ ಪ್ರಭುತ್ವ ಇದರಲ್ಲಿ ವ್ಯಕ್ತವಾಗಿದೆ. ಸ್ವಾಮಿ ವಿವೇಕಾನಂದರ ಸಮಗ್ರ ಭಾಷಣಗಳು, ಬರಹಗಳು, ಸಂವಾದಗಳ ಎಂಟು ಇಂಗ್ಲಿಷ್ ಸಂಪುಟಗಳನ್ನು ಲೀಲಾಜಾಲವಾಗಿ ಅತ್ಯಂತ ಕಡಿಮೆ ಕಾಲದಲ್ಲಿ ಅನುವಾದಿಸಿದುದರಲ್ಲಿಯೂ ಅವರ ಅನುವಾದ-ಸಾಮರ್ಥ್ಯವನ್ನು ಕಾಣಬಹುದು.




**ಸ್ವಾಮಿ ವಿವೇಕಾನಂದ ಜನ್ಮಶತಾಬ್ದಿ - 'ಕೃತಿಶ್ರೇಣಿ' :** ಸೋಮನಾಥಾನಂದರು ೧೯೫೦ರ ದಶಕದಲ್ಲಿಯೇ ಸ್ವಾಮಿ ವಿವೇಕಾನಂದರ ಬಿಡಿ ಉಪನ್ಯಾಸಗಳನ್ನು ಕನ್ನಡಕ್ಕೆ ಅನುವಾದಿಸಿ


ಒಂದೊಂದಾಗಿ ಪ್ರಕಟಿಸಲು ಪ್ರಾರಂಭಿಸಿದರು. ಪ್ರತಿಯೊಂದು ಪುಸ್ತಕವೂ ಓದುಗರ, ಭಕ್ತರ ಕುತೂಹಲವನ್ನು ಕೆರಳಿಸುತ್ತಿತ್ತು. ವಿವೇಕಾನಂದರು ಅಮೆರಿಕಾದಿಂದ ಹಿಂತಿರುಗಿದ ಮೇಲೆ ಭಾರತೀಯರನ್ನು ತಮೋನಿದ್ರೆಯಿಂದ ಎಬ್ಬಿಸಿ ಕಾರ್ಯೋನ್ಮುಖರನ್ನಾಗಿ ಮಾಡುವಂತಹ ಇಂಗ್ಲಿಷ್ ಉಪನ್ಯಾಸಗಳ ಮಾಲೆಯನ್ನು ಕನ್ನಡದಲ್ಲಿ 'ಕೊಲಂಬೊ ಇಂದ ಆಲ್ಮೋರಕೆ' ಎಂದು ಸೋಮನಾಥಾನಂದರು ಪ್ರಕಟಿಸಿದರು. ಓದುಗರ ಹೃದಯದಲ್ಲಿ ಹಿಂದೆಂದೂ ಅನುಭವಿಸದ ಜಾಗೃತಿಯ ಅಲೆಯನ್ನು ಎಬ್ಬಿಸಿದ ವಿವೇಕಾನಂದರ ವಾಕ್ಪ್ರವಾಹ ಅದರಲ್ಲಿ ಹರಿಯುತ್ತಿರುವುದನ್ನು ನೋಡಿ ಕುವೆಂಪು ಅವರು ಇದನ್ನು ಅನುವಾದಿಸಿರಬಹುದೆಂದು ಅನೇಕರು ಭಾವಿಸಿದ್ದರು. ಕುವೆಂಪು ಅದಕ್ಕೆ ಮುನ್ನುಡಿ ಬರೆದಿದ್ದರಷ್ಟೆ. ಈ ಪುಸ್ತಕವನ್ನು ಇಂಟರ್‌ಮೀಡಿಯೆಟ್‌ಗೆ (ಈಗಿನ ೧೧-೧೨ನೇ ತರಗತಿ) ಪಠ್ಯವನ್ನಾಗಿ ಮಾಡಲಾಯಿತು. ವಿವೇಕಾನಂದರ ಬಗ್ಗೆ ತಿಳಿಯದಿದ್ದ ವಿದ್ಯಾರ್ಥಿಗಳಿಗೆ ಅದು ಕಬ್ಬಿಣದ ಕಡಲೆಯಾಯಿತು.

ವಿವೇಕಾನಂದರ ಮುಖ್ಯ ಕೃತಿಗಳಾದ 'ರಾಜಯೋಗ',' ಭಕ್ತಿಯೋಗ', 'ಕರ್ಮಯೋಗ', ಮತ್ತು 'ಜ್ಞಾನಯೋಗ' ಪ್ರಕಟವಾದುವು. ಅವರ ಸಂಭಾಷಣೆಗಳನ್ನು 'ಸಂವಾದತರಂಗಿಣಿ' ಎಂಬ ಶೀರ್ಷಿಕೆಯಿಂದ ಪ್ರಕಟಿಸಲಾಯಿತು (ಈಗ ಇದರ ಶೀರ್ಷಿಕೆ, 'ಸ್ವಾಮಿ ವಿವೇಕಾನಂದರ ಸಂಭಾಷಣೆ'). ಅವರ ಪ್ರಸಿದ್ಧ ಉಪನ್ಯಾಸಗಳಾದ ಚಿಕಾಗೊ ಉಪನ್ಯಾಸಗಳು, ಭಾರತ ಮಹಿಳೆ, 'ನನ್ನ ಗುರುದೇವ', 'ಹಿಂದೂ ಧರ್ಮದ ಕರೆ', 'ನನ್ನ ಜೀವನ ಮತ್ತು ಧ್ಯೇಯ', 'ಧ್ಯಾನ' ಮುಂತಾದ ಅನೇಕ ಕಿರುಪುಸ್ತಕಗಳು ಮತ್ತು 'ವಿವೇಕವಾಣಿ' ಎಂಬ ವಿವೇಕಾನಂದರ ಬೋಧನೆಗಳ ಪುಟ್ಟ ಪುಸ್ತಕ, ಆಕರ್ಷಣೀಯವಾದ ಮುಖಪುಟಗಳೊಂದಿಗೆ ಒಂದಾದ ಮೇಲೊಂದರಂತೆ ಪ್ರಕಟವಾದುವು. 'ಪ್ರಾಚ್ಯ ಮತ್ತು ಪಾಶ್ಚಾತ್ಯ', 'ಪರಿವ್ರಾಜಕ', 'ರಾಷ್ಟ್ರನಿರ್ಮಾಣ', ಹಾಗೂ 'ಸ್ಫೂರ್ತಿವಾಣಿ' ಎಂಬ ಪುಸ್ತಕಗಳು ಸ್ವಾಮಿ ವಿವೇಕಾನಂದರ ಆಲೋಚನಾಲಹರಿ ಮತ್ತು ಭಾವಲಹರಿಯನ್ನು ಓದುಗರ ಮುಂದಿಟ್ಟವು. ಹೀಗೆ ದೀರ್ಘಕಾಲದ ನಿರಂತರ ಶ್ರಮದಿಂದ ತಯಾರಾದ ಹತ್ತು ಸಂಪುಟಗಳ 'ಸ್ವಾಮಿ ವಿವೇಕಾನಂದ ಕೃತಿಶ್ರೇಣಿ'ಯನ್ನು ವಿವೇಕಾನಂದರ ಜನ್ಮಶತಾಬ್ದಿ ವರ್ಷವಾದ ೧೯೬೩ರಲ್ಲಿ ಪ್ರಕಟಿಸಿಯೇ ಬಿಟ್ಟರು! ಇದೊಂದು ಏಕಾಂಗಿ ಸಾಹಸ. ಭಾರತೀಯ ಭಾಷೆಗಳಲ್ಲಿ ಬಂಗಾಳಿಯ ಹೊರತಾಗಿ ಇನ್ನಾವ ಭಾಷೆಯಲ್ಲಿಯೂ ಈ ಬೃಹತ್ಕಾರ್ಯ ಆಗಿರಲಿಲ್ಲ. ಇದನ್ನು ಆಗ ಇದ್ದ ಎಲ್ಲಾ ಹಿರಿಯ ಸ್ವಾಮಿಗಳೂ ಅಚ್ಚರಿಯಿಂದ ಶ್ಲಾಘಿಸಿದರು. ವಿಶೇಷವೆಂದರೆ, ಸಂಪುಟ ಆರು ಮತ್ತು ಏಳರಲ್ಲಿ ವಿವೇಕಾನಂದರ ಪತ್ರಮಾಲೆ ತಾರೀಕಿನ ಕ್ರಮದಲ್ಲಿತ್ತು.

**ಹೈಮಾಚಲ ಸಾನ್ನಿಧ್ಯದಲ್ಲಿ :** ಸೋಮನಾಥಾನಂದರು ೧೯೫೦ರ ದಶಕದಲ್ಲಿ ಬದರಿ ಕೇದಾರಗಳಿಗೆ ಒಮ್ಮೆ, ಅಮರನಾಥ ಯಾತ್ರೆಗೆ ಮತ್ತೊಮ್ಮೆ ಹೋಗಿದ್ದರು. ಅವರ ಪ್ರವಾಸ ಕಥನವನ್ನು 'ಹೈಮಾಚಲ ಸಾನ್ನಿಧ್ಯದಲ್ಲಿ' ಎಂದು ಪ್ರಕಟಿಸಿದರು. (ಈಗ ಇದು 'ಹಿಮಾಲಯ ಯಾತ್ರೆ' ಎಂಬ ಶೀರ್ಷಿಕೆಯಲ್ಲಿ ಪ್ರಕಟವಾಗುತ್ತಿದೆ). ಅದರಲ್ಲಿ ತಾವೇ ತೆಗೆದ ಛಾಯಾಚಿತ್ರಗಳನ್ನು ಸೇರಿಸಿದರು. ಪುಸ್ತಕಕ್ಕೆ ಕುವೆಂಪು ಅವರು ಬರೆದಿರುವ ಮುನ್ನುಡಿ ಸ್ವಾರಸ್ಯಕರವಾಗಿದೆ. ಓದುಗರಿಗೆ ತಾವೇ ಹಿಮಾಲಯ ಯಾತ್ರೆಯನ್ನು ಮಾಡಿದಂತೆ ಅನುಭವವಾಗುತ್ತದೆ. ಪುಸ್ತಕದ ಒಂದು ಭಾಗ ಪ್ರೌಢಶಾಲೆಯ ಪಠ್ಯಪುಸ್ತಕವಾಗಿತ್ತು. ಹಲವು ಬಾರಿ ಈ ಪುಸ್ತಕ ಮುದ್ರಣವಾಗಿದೆ. ಅಲ್ಲಲ್ಲಿ ತಿಳಿ ಹಾಸ್ಯ, ಚರಿತ್ರೆ, ನಿಸರ್ಗದ ಸೊಬಗು ಮತ್ತು ಧಾರ್ಮಿಕ ದೃಷ್ಟಿ ಮಿಳಿತವಾಗಿರುವ ಈ ಪುಸ್ತಕಕ್ಕೆ ಕನ್ನಡ ಪ್ರವಾಸ ಸಾಹಿತ್ಯದಲ್ಲೊಂದು ವಿಶಿಷ್ಟ ಸ್ಥಾನವಿದೆ.

**ಸ್ತವಕುಸುಮಾಂಜಲಿ, ಸ್ತೋತ್ರಸಾಹಿತ್ಯ :** ಶಾಂತಿಮಂತ್ರಗಳಿಂದ ಪ್ರಾರಂಭವಾಗಿ ದೇವಿ, ಶಿವ, ವಿಷ್ಣು, ರಾಮ, ಕೃಷ್ಣ, ರಾಮಕೃಷ್ಣ, ಶಾರದಾದೇವಿ – ಇವರ ಪ್ರಸಿದ್ಧ ಜನಪ್ರಿಯ ಸ್ತೋತ್ರಗಳಿಂದ ಒಡಗೂಡಿ ವಿವೇಕ-ವೈರಾಗ್ಯಗಳನ್ನು ಹೊಮ್ಮಿಸುವ, ವೇದಾಂತ ಸ್ತೋತ್ರಗಳಿಂದ ಕೊನೆಯಾಗುವ ತೊಂಭತ್ತು ಸ್ತೋತ್ರಗಳನ್ನು ಸರಳ ಅರ್ಥದೊಂದಿಗೆ 'ಸ್ತವಕುಸುಮಾಂಜಲಿ' ಎಂದು ೧೯೫೫ರಲ್ಲಿ ಪ್ರಕಟಿಸಿದರು. ಇದು ಅತ್ಯಂತ ಜನಪ್ರಿಯವಾಯಿತು. ಸ್ತೋತ್ರ ಸಾಹಿತ್ಯದಲ್ಲಿ ಜನಪ್ರಿಯವಾದ ಶ್ರೀ ಶಂಕರಾಚಾರ್ಯರ 'ಸೌಂದರ್ಯಲಹರೀ' ಮತ್ತು 'ಶಿವಾನಂದಲಹರೀ' ಹಾಗೂ 'ಅಷ್ಟಾವಕ್ರಗೀತೆ'ಗಳಿಗೆ ಪ್ರತಿ ಶ್ಲೋಕಕ್ಕೂ ಸರಳವಾದ ಅರ್ಥ ಬರೆದು ಪ್ರಕಟಿಸಿದರು. ೧೯೫೭ರಲ್ಲೇ ಬರೆದ ಇನ್ನೊಂದು ಕೃತಿ 'ನಾರದ ಭಕ್ತಿಸೂತ್ರ'. ಪ್ರತಿ ಸೂತ್ರಕ್ಕೂ ಸರಳವಾದ ಅರ್ಥದೊಂದಿಗೆ ಅದರ ಭಾವವನ್ನು ವಿವರಿಸಲಾಗಿದೆ.

**ಭಗವದ್ಗೀತೆ-ಉಪನಿಷತ್ :** ಮೈಸೂರು ಆಶ್ರಮದಲ್ಲಿ ಸ್ವಾಮಿ ಸೋಮನಾಥಾನಂದರು ಸಂಪೂರ್ಣ ಭಗವದ್ಗೀತೆಯ ಪ್ರವಚನಗಳನ್ನು ಮಾಡಿದ್ದರು. ಅವನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಿದರೆ ನಮಗೆ ಹೆಚ್ಚು ಉಪಯೋಗವಾಗುವುದು ಎಂದು ಭಕ್ತರು ಕೇಳಿಕೊಂಡುದರ ಫಲವೇ 'ಗೀತಾಭಾವಧಾರೆ.' ಇದು ೮೨೫ ಪುಟಗಳ ಬೃಹತ್ ಗ್ರಂಥ. ಕೇವಲ ಆರು ತಿಂಗಳಲ್ಲಿ ಬರೆದು ಮುಗಿಸಿದರು. ಪ್ರತಿ ಶ್ಲೋಕಕ್ಕೂ ಪದಕ್ಕೂ ಸರಳ ವಿವರಣೆ ಇದೆ. ಧ್ಯಾನಶ್ಲೋಕಗಳಿಗೂ ವಿವರಣೆ ಇದೆ. ಗೀತಾಭಾವಧಾರೆಯ ನಂತರ, ಅಷ್ಟೇ ಬೃಹತ್ತಾಗಿ, ಅದೇ ಶೈಲಿಯಲ್ಲಿ, ಅಲ್ಪ ಕಾಲದಲ್ಲಿಯೇ ಬರೆದು ಮುಗಿಸಿದ ಪುಸ್ತಕವೇ 'ಉಪನಿಷತ್ ಭಾವಧಾರೆ'. ಹನ್ನೊಂದು ಉಪನಿಷತ್ತುಗಳ ಪ್ರತಿ ಶ್ಲೋಕದ ವಿವರಣೆ ಇದರಲ್ಲಿದೆ. ಮೂವತ್ತುಮೂರು ಪುಟಗಳ 'ಉಪನಿಷತ್ ದರ್ಶನ' ಎಂಬ ಮುನ್ನುಡಿ ಉಪನಿಷತ್ತುಗಳ ಸಂದೇಶ ಮತ್ತು ಸ್ವರೂಪವನ್ನು ಅತ್ಯಂತ ಸರಳವಾಗಿ ಓದುಗರ ಮುಂದೆ ಇಟ್ಟಿದೆ. ಉಪನಿಷತ್ತುಗಳ ತತ್ತ್ವ ಮತ್ತು ಸಿದ್ಧಾಂತ ಎಷ್ಟು ಆಳವೋ, ಸೂಕ್ಷ್ಮವೋ ಅಷ್ಟೇ ಸರಳವಾಗಿದೆ ಅವುಗಳ ವಿವರಣೆ ಈ ಪುಸ್ತಕದಲ್ಲಿ. ತತ್ತ್ವ ಕಾವ್ಯದಂತೆ ವಿವರಿಸಲ್ಪಟ್ಟಿದೆ.




ಅದೇ ಕಾಲದಲ್ಲಿ ಪ್ರಕಟವಾದ ಅಷ್ಟೇ ದೊಡ್ಡ ಪುಸ್ತಕ, 'ಗುರುದೇವ ಶ್ರೀರಾಮಕೃಷ್ಣ' – ರಾಮಕೃಷ್ಣರ ವಿಸ್ತಾರವಾದ ಜೀವನ-ಬೋಧನೆಯನ್ನೊಳಗೊಂಡಿದೆ. ೧೯೭೭ರಲ್ಲಿ ಸ್ವಾಮಿ ಜ್ಞಾನೇಶ್ವರಾನಂದರ ಇಂಗ್ಲಿಷ್ ಪುಸ್ತಕ 'Yoga for Beginners' ಅನ್ನು ಓದಿ ಮೆಚ್ಚಿದ ಕೆಲವೇ ದಿನಗಳಲ್ಲಿ ಅದನ್ನು ಅನುವಾದಿಸಿ 'ನಾಲ್ಕು ಯೋಗಗಳು' ಎಂಬ ಹೆಸರಿನಿಂದ ಪ್ರಕಟಿಸಿದರು. ಅದರೊಂದಿಗೆ 'ಸ್ವಾಮಿ ವಿವೇಕಾನಂದ, ಜೀವನ-ಬೋಧನೆ' ಎಂಬ ಮುನ್ನೂರು ಪುಟಗಳ ಪುಸ್ತಕವನ್ನೂ ಬರೆದರು. ಇದರಲ್ಲಿ, ೧೪ ಪುಟಗಳ ವಿವೇಕಾನಂದರ ಶೀಲ ಮತ್ತು ೮೦ ಪುಟಗಳ ಸ್ವಾಮೀಜಿಯವರ ಬೋಧನೆ ಅಸದೃಶ ಕೊಡುಗೆ, ಕನ್ನಡಿಗರಿಗೆ.


## ಸ್ವಾಮಿ ಆದಿದೇವಾನಂದ

ಸ್ವಾಮಿ ಆದಿದೇವಾನಂದರು ಸೋಮನಾಥಾನಂದರ ಓರಗೆಯವರು. ಸ್ವಾಮಿ ವಿಜ್ಞಾನಾನಂದರ ಶಿಷ್ಯರು. ಹದಿನೈದು ವರ್ಷ ಮಂಗಳೂರಿನ ಆಶ್ರಮದ ಅಧ್ಯಕ್ಷರಾಗಿದ್ದರು. ಇವರದು ನಿರ್ದುಷ್ಟ ಪಾಂಡಿತ್ಯ. ಸೋಮನಾಥಾನಂದರು ದಿವ್ಯತ್ರಯರ ಬಗ್ಗೆ ಮತ್ತು ಆದಿದೇವಾನಂದರು ಪ್ರಸ್ಥಾನತ್ರಯ ಮತ್ತು ಶಾಸ್ತ್ರಗಳ ಬಗ್ಗೆ ಬರೆಯುವುದೆಂದು ಇವರಿಬ್ಬರ ಮಧ್ಯೆ ಒಡಂಬಡಿಕೆ ಆಗಿತ್ತು. ಅದರಂತೆ ಆದಿದೇವಾನಂದರು ೧೯೫೬ರಲ್ಲಿ ಭಗವದ್ಗೀತೆಯ ಶ್ಲೋಕಗಳಿಗೆ ಪ್ರತಿಪದಾರ್ಥ, ತಾತ್ಪರ್ಯಗಳೊಂದಿಗೆ ತ್ರಿಮತಾಚಾರ್ಯರ ಭಾಷ್ಯಗಳನ್ನು ಬರೆದು ಸೇರಿಸಿದರು. ಅದಕ್ಕೆ ಸೋಮನಾಥಾನಂದರು, 'ಸೃಷ್ಟಿನಾಟಕದ ಕವಿ ಶ್ರೀಕೃಷ್ಣ' ಎಂದು ಪ್ರಾರಂಭವಾಗುವ ಮುನ್ನುಡಿಯನ್ನು ಬರೆದರು. ನಂತರ, ಆದಿದೇವಾನಂದರು ಭಗವದ್ಗೀತೆಯ ರೀತಿಯಲ್ಲೆ ಬೃಹದಾರಣ್ಯಕ, ಛಾಂದೋಗ್ಯ ಉಪನಿಷತ್ತುಗಳು ಸೇರಿದಂತೆ ಹನ್ನೊಂದು ಉಪನಿಷತ್ತುಗಳಿಗೂ ಅರ್ಥ, ಪ್ರತಿಪದಾರ್ಥ, ವಿವರಣೆಗಳನ್ನು ಒಂದಾದ ಮೇಲೊಂದರಂತೆ ಬರೆದರು. ಇವಲ್ಲದೆ, ಬ್ರಹ್ಮಸೂತ್ರ, ಪಾತಂಜಲ ಯೋಗದರ್ಶನ, ಲಲಿತಾಸಹಸ್ರನಾಮ ಮತ್ತು ತ್ರಿಶತಿ, ವಿವೇಕಚೂಡಾಮಣಿ, ಮತ್ತು ಪಂಚದಶಿಯನ್ನು ಅದೇ ರೀತಿ ಬರೆದರು. ಇವಲ್ಲದೆ ಇಂಗ್ಲಿಷ್‌ನಲ್ಲಿ ಬರೆದ ರಾಮಾನುಜ ಭಾಷ್ಯ ಸಹಿತ ಬ್ರಹ್ಮಸೂತ್ರ, ಮತ್ತು ಭಗವದ್ಗೀತೆ, ಯತೀಂದ್ರ ಮತ ದೀಪಿಕಾ ಮತ್ತು ಸ್ತೋತ್ರರತ್ನ ಮದರಾಸಿನ ಆಶ್ರಮದಿಂದ ಪ್ರಕಟವಾಗಿವೆ. ಬೆಂಗಳೂರಿನ ಬಸವನಗುಡಿ ಆಶ್ರಮದ ಅಧ್ಯಕ್ಷರಾಗಿದ್ದಾಗ ತಪ್ಪದೆ ಪ್ರತಿ ಶನಿವಾರ ಮತ್ತು ಭಾನುವಾರ ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಅನೇಕ ವರ್ಷಗಳ ಕಾಲ ಲಲಿತಾಸಹಸ್ರನಾಮದ ಮೇಲೆ ಉಪನ್ಯಾಸ ಮಾಡುತ್ತಿದ್ದರು.

## ಸ್ವಾಮಿ ಹರ್ಷಾನಂದ

ಸ್ವಾಮಿ ಹರ್ಷಾನಂದರ ಹೆಸರನ್ನು ಕೇಳಿದ ಕೂಡಲೆ ನಮಗೆ ನೆನಪಾಗುವುದು ಅವರ 'ಶ್ರೀರಾಮಕೃಷ್ಣ ಸುಪ್ರಭಾತಮ್.' ಹರ್ಷಾನಂದರು ಸಂಸ್ಕೃತದಲ್ಲಿ ಸ್ವಯಂ ಆಚಾರ್ಯರು. ಅವರ ಪ್ರವಚನಗಳೂ ಶಾಸ್ತ್ರಾಧಾರಿತವಾಗಿದ್ದವು. ಆದಿದೇವಾನಂದರು ಮಂಗಳೂರು ಆಶ್ರಮದ ಅಧ್ಯಕ್ಷರಾಗಿದ್ದಾಗ ಅಲ್ಲಿಯೇ ಬ್ರಹ್ಮಚಾರಿಗಳಾಗಿದ್ದ ಇವರು ಆದಿದೇವಾನಂದರು ಹೇಳಿದ್ದನ್ನು ಬರೆದುಕೊಳ್ಳುವ ಮೂಲಕ ಅವರ ಗ್ರಂಥರಚನೆಗೆ ಸಹಾಯಕರಾಗಿದ್ದರು. ಸುಮಾರು ಹನ್ನೆರಡು ವರ್ಷ ಮೈಸೂರು ಆಶ್ರಮದ ವೇದಾಂತ ಕಾಲೇಜಿನ (ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಸಂಸ್ಥೆ – ರಿಂಸೆ) ಮುಖ್ಯಸ್ಥರಾಗಿದ್ದರು. ಆಗ ಪ್ರಪಂಚದ ಧರ್ಮಗಳ ಚಿಹ್ನೆಗಳ ಚಿತ್ರದೊಂದಿಗೆ ಅವುಗಳ ಅರ್ಥ ಇರುವ ಪುಟ್ಟ ಪುಸ್ತಕ, ದೇವಾಲಯಗಳ ವಿನ್ಯಾಸದ ಬಗ್ಗೆ ಮತ್ತು ಹಿಂದೂ ದೇವದೇವಿಯರ ಬಗ್ಗೆ ಮೂರು ಕಿರುಹೊತ್ತಿಗೆಗಳನ್ನು ಹೊರ ತಂದರು. ವೇದಾಂತ ಕಾಲೇಜಿನಲ್ಲಿ ನಡೆಯುತ್ತಿದ್ದ ಆಧ್ಯಾತ್ಮಿಕ ಶಿಬಿರಾರ್ಥಿಗಳಿಗೆ ಇವುಗಳಿಂದ ತಿಳಿವಳಿಕೆ ದೊರೆಯುತ್ತಿತ್ತು.

ಇವರ ಬರವಣಿಗೆ ಬಹುಭಾಗ ಇಂಗ್ಲಿಷ್‌ನಲ್ಲಿ, ಪದ್ಯ-ರಚನೆ ಸಂಸ್ಕೃತದಲ್ಲಿ. ಕನ್ನಡದಲ್ಲಿ ಬರೆದುದು ಕಡಿಮೆ. ರಾಮಕೃಷ್ಣರು, ವಿವೇಕಾನಂದರು ಮತ್ತು ಶಾರದಾದೇವಿಯವರ ಬಗ್ಗೆ ರಚಿಸಿರುವ ಒಂಬತ್ತು ಸಂಸ್ಕೃತ ಪ್ರಾರ್ಥನಾಪದ್ಯಗಳು ಇವರ ಕಾವ್ಯರಚನಾಪ್ರತಿಭೆಗೆ ಉದಾಹರಣೆಗಳಾಗಿವೆ. ಶ್ರೀರಾಮಕೃಷ್ಣ ಸುಪ್ರಭಾತಮ್, ಶ್ರೀರಾಮಕೃಷ್ಣ ಪ್ರಪತ್ತಿಃ, ಶ್ರೀವಿವೇಕಾನಂದ ಪ್ರಣತಿಮಾಲಿಕಾ ಮತ್ತು ಶ್ರೀಶಾರದಾಸ್ತುತಿಸಪ್ತಕ 'ಸ್ತವಕುಸುಮಾಂಜಲಿ'ಯಲ್ಲಿ ಸೇರಿವೆ. ಇವಲ್ಲದೆ ದಿವ್ಯತ್ರಯರ ಮೇಲೆ ಪ್ರತ್ಯೇಕ ಅಷ್ಟೋತ್ತರಶತನಾಮಾವಲಿಃ, ಶ್ರೀವಿವೇಕಾನಂದ ಪ್ರಭಾತ ಪ್ರಾಂಜಲಿಃ ಮತ್ತು ಶ್ರೀರಾಮಕೃಷ್ಣ ನಾಮಸಂಕೀರ್ತನಮ್ ರಚಿಸಿದ್ದಾರೆ. ಈ ರಚನೆಗಳನ್ನು ಅವರೇ ಹಾಡುವುದನ್ನು ಕೇಳಿದವರಿಗೆ ವಿಶಿಷ್ಟ ಅನುಭವವಾಗುತ್ತಿತ್ತು. ಇವರ ಕೆಲವು ಭಜನೆಗಳ ಗ್ರಾಮಫೋನ್ ಧ್ವನಿಮುದ್ರಿಕೆ ೧೯೮೦ರಲ್ಲಿ ಬಿಡುಗಡೆಯಾಯಿತು.




ಸ್ವಾಮಿ ಹರ್ಷಾನಂದರ **ದುರ್ಗಾಸಪ್ತಶತೀ** ಮತ್ತು **ಶಿವಸಹಸ್ರನಾಮ** – ಇವೆರಡೂ ಮೂಲದೊಂದಿಗೆ ಕನ್ನಡದಲ್ಲಿ ಅರ್ಥ, ಭಾಷ್ಯ ಮತ್ತು ಭಾವಾರ್ಥದೊಂದಿಗೆ ೧೯೬೫ರಲ್ಲಿ ಮೈಸೂರು ಆಶ್ರಮದಿಂದ ಪ್ರಕಟವಾಯಿತು. ಒಟ್ಟೂರು ಬಾಲಭಟ್ಟರ

ಶ್ರೀರಾಮಕೃಷ್ಣ ಕರ್ಣಾಮೃತಮ್, ಸದಾನಂದರ ವೇದಾಂತ ಸಾರ, ಶಂಕರಾಚಾರ್ಯರ ಆತ್ಮಬೋಧ, ಅಪರೋಕ್ಷಾನುಭೂತಿ, ವಾಕ್ಯವೃತ್ತಿ, ಲಘುವಾಕ್ಯವೃತ್ತಿ, ವಿದ್ಯಾರಣ್ಯರ ಜೀವನ್ಮುಕ್ತಿವಿವೇಕ, ಶಾಂಡಿಲ್ಯ ಭಕ್ತಿಸೂತ್ರಗಳು – ಇವಕ್ಕೆಲ್ಲಾ ಕನ್ನಡದಲ್ಲಿ ಅರ್ಥ ಬರೆದರು. ಇವು ಸಂಸ್ಕೃತ ಮೂಲದೊಂದಿಗೆ ಮೈಸೂರು ಆಶ್ರಮದಿಂದ ಪ್ರಕಟವಾದುವು. 'ದುರ್ಗಾಸಪ್ತಶತಿ'ಗೆ ಆದಿದೇವಾನಂದರು, 'ರಾಮಕೃಷ್ಣ ಕರ್ಣಾಮೃತ'ಕ್ಕೆ ಸೋಮನಾಥಾನಂದರು ಮುನ್ನುಡಿ ಬರೆದಿರುವುದು ಗಮನಾರ್ಹ. ಸ್ವಾಮಿ ಶಾಂಭವಾನಂದರ ಬಗ್ಗೆ ಇವರು ಬರೆದ ಕಿರುಪುಸ್ತಕ ೧೯೭೭ ರಲ್ಲಿ ರಾಷ್ಟ್ರೋತ್ಥಾನ ಪರಿಷತ್ತಿನಿಂದ ಪ್ರಕಟವಾಯಿತು. ಇದಕ್ಕೆ ಬೇಕಾದ ವಿವರಗಳನ್ನು ಸೋಮನಾಥಾನಂದರು ಕೊಟ್ಟಿದ್ದರು. ಇವರು ವೇದಾಂತ ಕಾಲೇಜಿನಲ್ಲಿದ್ದಾಗಲೇ ಸ್ವಾಮಿ ವಿವೇಕಾನಂದರ ಕರ್ಮಯೋಗ ಉಪನ್ಯಾಸದ ಮುಖ್ಯಾಂಶಗಳನ್ನು ಸಂಸ್ಕೃತ ಸೂತ್ರಗಳ ರೂಪದಲ್ಲಿ, 'ಕರ್ಮಯೋಗಸೂತ್ರಶತಕಮ್' ಎಂದು ಬರೆದುದು ಇವರ ಕಲ್ಪನೆ ಮತ್ತು ಸಂಸ್ಕೃತದಲ್ಲಿದ್ದ ರಚನಾ ಸಾಮರ್ಥ್ಯವನ್ನು ತೋರಿಸುತ್ತದೆ.

ಬಸವನಗುಡಿ ಆಶ್ರಮದ ಅಧ್ಯಕ್ಷರಾಗಿದ್ದ ಕಾಲದಲ್ಲಿ ಇವರ ಇಂಗ್ಲಿಷ್ ಬರವಣಿಗೆ ಅವ್ಯಾಹತವಾಗಿ ಸಾಗಿತು. ಮೂವತ್ತಕ್ಕೂ ಹೆಚ್ಚು ಪುಸ್ತಕಗಳು ಇಂಗ್ಲಿಷ್‌ನಲ್ಲಿ ಪ್ರಕಟವಾದುವು. ಅವರ ಬಹುಕಾಲದ ಅಪೇಕ್ಷೆಯಂತಿದ್ದ ಹಿಂದೂಧರ್ಮದ ಮೂರು ಸಂಪುಟಗಳ ವಿಶ್ವಕೋಶ ಮತ್ತು ಅದ್ವೈತ ವೇದಾಂತದ ನಿಘಂಟನ್ನು ಶ್ರಮಪಟ್ಟು ಮುಗಿಸಿ ಪ್ರಕಟಿಸಿದರು. ಉಳಿದವೆಲ್ಲಾ ಸಣ್ಣ ಪುಸ್ತಕಗಳೇ. ಹಿಂದೂಧರ್ಮದ ತತ್ತ್ವಗಳು, ಶಾಸ್ತ್ರಗಳು, ಪುರಾಣಗಳು, ಆಚಾರಗಳು, ಉಪನಿಷತ್ತುಗಳು, ವೇದಗಳು, ದರ್ಶನಗಳು, ಆಗಮ, ಮತಗಳು – ಹೀಗೆ ಹಿಂದೂಧರ್ಮದ ಎಲ್ಲಾ ಅಂಶಗಳನ್ನೂ ಒಳಗೊಳ್ಳುತ್ತವೆ ಅವರ ಬರವಣಿಗೆಗಳು. ಇವುಗಳಲ್ಲಿ ಕೆಲವನ್ನು ಕನ್ನಡದಲ್ಲಿಯೂ ಬರೆದಿದ್ದಾರೆ. ವಿದ್ಯಾರ್ಥಿಗಳು ಮತ್ತು ವಿದ್ಯಾಭ್ಯಾಸದ ಬಗ್ಗೆಯೂ ಕೆಲವು ಸಣ್ಣ ಪುಸ್ತಕಗಳನ್ನು ಬರೆದಿದ್ದಾರೆ. ಇವರು ಆಧ್ಯಾತ್ಮಿಕ ಶಿಬಿರಗಳಲ್ಲಿ ನಡೆಸು ತ್ತಿದ್ದ ಪ್ರಶ್ನೋತ್ತರಗಳು – ಮೈಸೂರಿನಲ್ಲಿ ಮತ್ತು ಬೆಂಗಳೂರಿನಲ್ಲಿ – ಯಾವಾಗಲೂ ಸ್ವಾರಸ್ಯಕರವಾಗಿ ಹಾಸ್ಯದಿಂದ ಕೂಡಿರುತ್ತಿದ್ದುವು. ಘನ ವಿದ್ವಾಂಸರಾಗಿದ್ದರೂ ಇವರ ಬರವಣಿಗೆ ಸ್ಪಷ್ಟವಾಗಿ ಸರಳವಾಗಿರುವುದರಿಂದ, ಪುಸ್ತಕಗಳು ಸಣ್ಣದಾಗಿರುವುದರಿಂದ ಅವು ಜನಪ್ರಿಯವಾಗಿ ಸಾಮಾನ್ಯರಿಗೆ ಉಪಯುಕ್ತವಾಗಿವೆ. ಇವರ ಸಂಭಾಷಣೆ ವಿಷಯಕ್ಕೆ ಸೀಮಿತ. ದೇಹಾರೋಗ್ಯದ ಸಮಸ್ಯೆ ಇದ್ದರೂ ಅವರ ಶ್ರಮ ಮತ್ತು ಕಾಲವನ್ನು ಅಪಾರ ಶಾಸ್ತ್ರಸಾಹಿತ್ಯ ರಚನೆಗೆ ವಿನಿಯೋಗಿಸಿ ಧರ್ಮಪಿಪಾಸುಗಳಿಗೆ ಅವರ ಕೊಡುಗೆಯನ್ನು ಕೊಟ್ಟಿರುವರು.


### ಸ್ವಾಮಿ ಜಗದಾತ್ಮಾನಂದ

ಸ್ವಾಮಿ ಜಗದಾತ್ಮಾನಂದರು ಹರ್ಷಾನಂದರ ಸಮಕಾಲೀನರು. ಸರಳರು. ಪೂರ್ವಭಾಷಿಗಳು. ಎಲ್ಲರನ್ನೂ ಮಾತನಾಡಿಸುತ್ತಿದ್ದರು. ಜನಾನುರಾಗಿಗಳು. ಚೆನ್ನಾಗಿ ಹಾಡಬಲ್ಲವರಾಗಿದ್ದರು. ಮೈಸೂರು ಆಶ್ರಮದಲ್ಲಿ ಆಧ್ಯಾತ್ಮಿಕ ಶಿಬಿರದಲ್ಲಿ 'ರಾಮಕೃಷ್ಣ ಲೀಲಾಕಥನ' ಮತ್ತು 'ವಿವೇಕಾನಂದ ಲೀಲಾಕಥನ' ಎಂಬ ಹರಿಕಥೆ ಮಾಡುತ್ತಿದ್ದರು. ಅದರಲ್ಲಿ ಹರ್ಷಾನಂದರು ಹಾಡುತ್ತಿದ್ದರು.

ಅವರು ಬರೆದುದು ಕೆಲವೇ ಪುಸ್ತಕಗಳು. ಆದರೆ ಅಪಾರ ಕೀರ್ತಿ ಗಳಿಸಿದರು. ಸ್ವಾಮಿ ಅಖಂಡಾನಂದರ ಬಗ್ಗೆ ಬರೆದ ಕಿರುಪುಸ್ತಕ ೧೯೭೫ರಲ್ಲಿ ರಾಷ್ಟ್ರೋತ್ಥಾನ ಪರಿಷತ್ತಿನಿಂದ ಪ್ರಕಟವಾಯಿತು. ನಂತರ ಅವರು ಬರೆದುದೇ 'ಬದುಕಲು ಕಲಿಯಿರಿ' ಎಂಬ ಪುಸ್ತಕ. ಕೆಲವು ವರ್ಷಗಳ ನಂತರ ಅದರ ಎರಡನೆ ಭಾಗವನ್ನು ಬರೆದರು. ಕನ್ನಡ ಆವೃತ್ತಿಯೇ ಒಂದು ಲಕ್ಷ ಪ್ರತಿಗಳು ಮಾರಾಟವಾಗಿ ದಾಖಲೆ ಮಾಡಿತು. ಇಂಗ್ಲಿಷ್ ಸೇರಿದಂತೆ ಒಂಭತ್ತು ಭಾಷೆಗಳಿಗೆ ಅನುವಾದವಾಗಿದೆ. ಒಟ್ಟು ಮೂರು ಲಕ್ಷ ಪ್ರತಿಗಳು ಮಾರಾಟವಾಗಿವೆ ಎಂದು ಅಂದಾಜು ಮಾಡಲಾಗಿದೆ. ಈ ಪುಸ್ತಕವನ್ನು ಬರೆಯುವ ಸಮಯದಲ್ಲಿ ಜಗದಾತ್ಮಾನಂದರು ಈ ಲೇಖಕನನ್ನು ತಾಯಿಯ ಪ್ರೀತಿಯನ್ನು ವಿವರಿಸುವ ಘಟನೆಯೊಂದನ್ನು ಕೇಳಿದರು. ಅದನ್ನು ಇಷ್ಟಪಟ್ಟು ಈ ಪುಸ್ತಕದಲ್ಲಿ ಸೇರಿಸಿದರು. ಈ ಪುಸ್ತಕದ ಜನಪ್ರಿಯತೆಗೆ ಕಾರಣ ದಿನನಿತ್ಯದ ಘಟನೆಗಳಿಂದ ಯುವಕರು ಕಲಿಯಬಹುದಾದ ಅಮೂಲ್ಯವಾದ ಪಾಠಗಳನ್ನು ಹೇರಳವಾದ ಸಂಖ್ಯೆಯಲ್ಲಿ ಸರಳ ಭಾಷೆಯಲ್ಲಿ ಚುಟುಕುಗಳಂತೆ ಬರೆದಿರುವುದು. ಪುನರ್ಜನ್ಮದ ಬಗ್ಗೆ ಆಸಕ್ತಿಯುಳ್ಳವರಾಗಿದ್ದ ಇವರು 'ಬದುಕಿನ ಈಚೆಗೆ ಸಾವಿನ ಆಚೆಗೆ' ಎಂಬ ಪುಸ್ತಕ ಬರೆದರು. ನಂತರ 'ಏಳಿ! ಎದ್ದೇಳಿ!' ಎಂಬ ಪುಸ್ತಕವನ್ನೂ ಬರೆದರು. ಅವರಂತೆಯೇ ಅವರ ಬರವಣಿಗೆಯೂ ಜನಪ್ರಿಯವಾಯಿತು.

### ಸ್ವಾಮಿ ಪುರುಷೋತ್ತಮಾನಂದ

ಸ್ವಾಮಿ ಪುರುಷೋತ್ತಮಾನಂದರ ಹೆಸರನ್ನು ಕೇಳಿದ ಕೂಡಲೆ ಭಕ್ತರ ಕಿವಿಯಲ್ಲಿ ಮೊಳಗುವುದು ಅವರ ಸುಶ್ರಾವ್ಯ ಭಜನೆ. ಭಜನಾನಂದವನ್ನು ಸವಿಯಲು ಭಕ್ತರು ಕಿಕ್ಕಿರಿದು ಸೇರುತ್ತಿದ್ದರು. ಅವರಿಂದ ಬಸವನಗುಡಿ ಆಶ್ರಮ ಭಜನೆಗೆ ಹೆಸರುವಾಸಿಯಾಯಿತು. ೧೯೭೭ರ ನಂತರ ಸ್ವಾಮಿ ಆದಿದೇವಾನಂದರಿಗೆ ಪ್ರವಚನ ಮಾಡಲು ಕಷ್ಟವಾಗುತ್ತಿತ್ತು. ಶನಿವಾರಗಳಂದು ಸ್ವಾಮಿ ಪುರುಷೋತ್ತಮಾನಂದರ 'ಭಕ್ತಿ ಕುಸುಮಾಂಜಲಿ' ಎಂಬ ಕನ್ನಡ ಪ್ರವಚನಗಳು ಆರಂಭವಾದುವು. ಮಧ್ಯೆಮಧ್ಯೆ ಅವರು ಹಾಡುತ್ತಿದ್ದರು. ಅವರ ಪ್ರವಚನಗಳು ಜನಪ್ರಿಯವಾದುವು. ಆಗ ಸಿ.ಡಿ. ಮುಂತಾದವು ಇರಲಿಲ್ಲ. ಅಲ್ಲೊಬ್ಬರು ಇಲ್ಲೊಬ್ಬರು ಅವರ ಭಜನೆಯ ಕ್ಯಾಸೆಟ್ ಇಟ್ಟುಕೊಂಡಿರುತ್ತಿದ್ದರು. ಅವಕ್ಕೆ ಭಾರಿ ಬೇಡಿಕೆ ಇರುತ್ತಿತ್ತು. ಅವರ ಹಳೆಯ ಮಧುರ ಧ್ವನಿ ಇಂದಿಗೂ ಮನಮೋಹಕವಾಗಿ ಭಕ್ತಿಭಾವಪೂರ್ಣವಾಗಿ ಮತ್ತೆ ಮತ್ತೆ ಕೇಳಬೇಕೆನಿಸುತ್ತದೆ.








ಇವರು ಲೇಖಕರಾದುದು ಆಶ್ಚರ್ಯಕರ. ಮೊದಲು ಬರೆದ 'ಶ್ರೀಶಾರದಾದೇವಿ ಜೀವನಗಂಗಾ' ಎಂಬ ವಿಸ್ತಾರವಾದ ಜೀವನ ಚರಿತ್ರೆ ಅತ್ಯಂತ ಜನಪ್ರಿಯತೆ ಗಳಿಸಿ ಅನೇಕ ಮರುಮುದ್ರಣಗಳನ್ನು ಕಂಡಿತು. ನಂತರ ಸ್ವಾಮಿ ವಿವೇಕಾನಂದರ ಜೀವನವನ್ನು ಮೂರು ಭಾಗಗಳಾಗಿ, 'ವೀರಸಂನ್ಯಾಸಿ ವಿವೇಕಾನಂದ', 'ವಿಶ್ವ ವಿಜೇತ ವಿವೇಕಾನಂದ' ಮತ್ತು 'ವಿಶ್ವಮಾನವ ವಿವೇಕಾನಂದ' ಎಂದು ಬರೆದರು. ಇವಕ್ಕೆ ವಿಶ್ವಮಾನವ ಪುರಸ್ಕಾರ ದೊರೆಯಿತು. ಶ್ರೀರಾಮಕೃಷ್ಣರ ಜೀವನವನ್ನು 'ಯುಗಾವತಾರ ಶ್ರೀರಾಮಕೃಷ್ಣ' ಎಂದು ನಾಲ್ಕು ಭಾಗಗಳಲ್ಲಿ ಪ್ರಕಟಿಸಿದರು (ಇದರ ಮೈಸೂರು ಆಶ್ರಮದ ಪ್ರಕಟಣೆ ಎರಡು ಭಾಗಗಳಲ್ಲಿ ಪ್ರಕಟವಾಯಿತು). ಇದರ ವಾಕ್ಯಗಳು ಪುಟ್ಟದಾಗಿ ಸರಳವಾಗಿವೆ ಎಂದು ಸ್ವಾಮಿ ಸೋಮನಾಥಾನಂದರು ಅವರ ಮೆಚ್ಚುಗೆಯನ್ನು ತಮ್ಮ ಮುನ್ನುಡಿಯಲ್ಲಿ ಬರೆದಿರುವರು. ಇವಲ್ಲದೆ 'ವಿದ್ಯಾರ್ಥಿಗಾಗಿ', 'ಯುವಶಕ್ತಿಯ ರಹಸ್ಯ', 'ಶಕ್ತಿಶಾಲಿ ವ್ಯಕ್ತಿತ್ವ ನಿರ್ಮಾಣ', ಮುಂತಾದ ಯುವಕರ ವ್ಯಕ್ತಿತ್ವ ನಿರ್ಮಾಣಕ್ಕೆ ಪ್ರೇರಕಶಕ್ತಿಯಾಗುವಂತಹ ಇಪ್ಪತ್ತಕ್ಕೂ ಹೆಚ್ಚು ಪುಸ್ತಕಗಳನ್ನು ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಪ್ರಕಟಿಸಿದರು.

ಮತ್ತೊಂದು ವಿಷಯವನ್ನು – ಅದು ಸಾಹಿತ್ಯ ನಿರ್ಮಾಣಕ್ಕೆ ಸಂಬಂಧಿಸದಿದ್ದರೂ – ಗಮನಿಸದಿದ್ದರೆ ಅವರ ವ್ಯಕ್ತಿತ್ವವನ್ನು ತಿಳಿದಂತಾಗುವುದಿಲ್ಲ. ಅವರು ನಿತ್ಯವೂ ನಡೆಸುತ್ತಿದ್ದ ಸಂಧ್ಯಾರತಿಯ ಭಜನೆಯಲ್ಲಿ ಭಕ್ತರಿಗೆ ಭಜನೆ ತರಪೇತಿಯೂ ಅವರಿಗರಿವಿಲ್ಲದಂತೆ ನಡೆಯುತ್ತಿತ್ತು. ವಿವೇಕಾನಂದ ಬಾಲಕ ಸಂಘ ಮತ್ತು ಯುವಕ ಸಂಘದವರಿಗೆ ಹಾಡುವುದರಲ್ಲಿ ವೇದಪಠನೆಯಲ್ಲಿ ಒಳ್ಳೆಯ ತರಪೇತಿಯನ್ನು ಕೊಟ್ಟರು. ಅಲ್ಲದೆ, ಅವರಿಗೆಲ್ಲಾ ಶಿಸ್ತಿನಿಂದ ವಿಧೇಯತೆಯಿಂದ ಆಶ್ರಮದ ಸೇವಾಕಾರ್ಯಗಳನ್ನು ಮಾಡುವುದಕ್ಕೆ, ನಾಯಕತ್ವಕ್ಕೆ ಪುರುಷೋತ್ತಮಾನಂದರು ಮಾರ್ಗದರ್ಶನ ಮಾಡುತ್ತಿದ್ದರು. ಇದರಿಂದ ಪ್ರೇರಿತವಾದ ಯುವಪೀಳಿಗೆಯಿಂದ ಅನೇಕ ಉತ್ತಮ ವ್ಯಕ್ತಿಗಳೂ ಒಳ್ಳೆಯ ನಾಯಕರೂ ಉದ್ಯಮಶೀಲರೂ ಪೌರರೂ ನಿವೃತ್ತಿಮಾರ್ಗ ಹಿಡಿದ ಸಂನ್ಯಾಸಿ-ಸಂನ್ಯಾಸಿನಿಯರೂ ಬಂದರು.

### ಸ್ವಾಮಿ ನಿತ್ಯಸ್ಥಾನಂದ

ಸ್ವಾಮಿ ನಿತ್ಯಸ್ಥಾನಂದರು ಮೈಸೂರಿನಲ್ಲಿ ಬ್ರಹ್ಮಚಾರಿಗಳಾಗಿದ್ದಾಗಲೇ ಅವರ ಸಾಹಿತ್ಯ ಸೇವೆ ಪ್ರಾರಂಭವಾಯಿತು. ತಮ್ಮ ಪಾಲಿಗೆ ಬಂದ ಕೆಲಸವನ್ನು ಶ್ರದ್ಧೆಯಿಂದ ಮಾಡುತ್ತಿದ್ದುದನ್ನು ಗಮನಿಸಿದ ಸೋಮನಾಥಾನಂದರು, 'Reminiscences of Swami Vivekananda' ಮತ್ತು ಪ್ರಭವಾನಂದರ 'Spiritual Heritage of India' ಪುಸ್ತಕಗಳನ್ನು ಕನ್ನಡಕ್ಕೆ ಅನುವಾದಿಸಲು ಹೇಳಿದರು. ಅವೇ 'ಸ್ವಾಮಿ ವಿವೇಕಾನಂದರ ದಿವ್ಯಸ್ಮೃತಿ' (ಇತ್ತೀಚೆಗೆ ಈ ಕೃತಿಯ ಪರಿಷ್ಕೃತ ಮುದ್ರಣ ಪ್ರಕಟವಾಗಿದೆ. ಇದರ ಶೀರ್ಷಿಕೆ ಈಗ 'ವಿಶ್ವಗುರು ಸ್ವಾಮಿ ವಿವೇಕಾನಂದ' ಎಂದು ಬದಲಾಗಿದೆ.) ಮತ್ತು 'ಭಾರತೀಯ ಆಧ್ಯಾತ್ಮಿಕ ಪರಂಪರೆ'. ಸೋಮನಾಥಾನಂದರು ಶಾರದಾದೇವಿಯವರ ವಿಸ್ತಾರವಾದ ಜೀವನ ಚರಿತ್ರೆ ಬರೆಯಲು ಮನಸ್ಸು ಮಾಡಲಿಲ್ಲ. ಮಹಾಮಾತೆಯವರ ಬಗ್ಗೆ ಆಗ ಲಭ್ಯವಿದ್ದ ಹೆಚ್ಚು ವಿವರಗಳನ್ನು ಸೇರಿಸಿ ಸ್ವಂತ ಭಾಷೆಯಲ್ಲಿ ಬರೆಯುವಂತೆ ನಿತ್ಯಸ್ಥಾನಂದರಿಗೆ ಅವರು ಹೇಳಿದರು. ಅದೇ 'ಶ್ರೀಮಾತೆ ಶಾರದಾದೇವಿ'. ಅದರಂತೆಯೇ ನಿವೇದಿತಾ ಜೀವನ ಚರಿತ್ರೆಯನ್ನೂ ಬರೆಯಲು ಹೇಳಿದರು, ಆಶ್ರಮದ ಪ್ರಕಟಣೆಯಲ್ಲಿ ಅದು ಇರಲಿಲ್ಲ. ಮತ್ತೊಂದು ಮುಖ್ಯವಾದ ಪುಸ್ತಕ, 'ಸತ್ಕಥಾ'. ಇದು ಸ್ವಾಮಿ ಅದ್ಭುತಾನಂದರ ಸಂಭಾಷಣೆ. ಇದನ್ನು ಚಂದ್ರಶೇಖರ ಚಟ್ಟೋಪಾಧ್ಯಾಯರ ಬಂಗಾಳಿ ಪುಸ್ತಕದಿಂದ ನಿತ್ಯಸ್ಥಾನಂದರು ಸಂಗ್ರಹಿಸಿ ಅನುವಾದಿಸಿದರು. ಈಗ 'ಅದ್ಭುತವಾಣಿ' ಎಂಬ ಹೆಸರಿನಿಂದ ಇದು ಮರುಮುದ್ರಣವಾಗಿದೆ. ನಂತರ, ಸ್ವಾಮಿ ಯತೀಶ್ವರಾನಂದರ 'Meditation and Spiritual Life' ಗ್ರಂಥವನ್ನು ಅನುವಾದಿಸುವಂತೆ ಸೋಮನಾಥಾನಂದರು ಹೇಳಿದರು. ಅದು ಈಗ 'ಧ್ಯಾನ ಮತ್ತು ಆಧ್ಯಾತ್ಮಿಕ ಜೀವನ' ಎಂಬ ಶೀರ್ಷಿಕೆಯಲ್ಲಿ ಪ್ರಕಟವಾಗಿದ್ದು, ಅಪಾರ ಜನಪ್ರಿಯತೆಯನ್ನು ಗಳಿಸಿದೆ. ಆಧ್ಯಾತ್ಮಿಕ ಸಾಧಕರಿಗೆ ಅತ್ಯುಪಯುಕ್ತವಾದ ಗ್ರಂಥವಾಗಿ ಇದು ಪರಿಣಮಿಸಿದೆ.



ಬಂಗಾಳಿಯ 'ಶ್ರೀರಾಮಕೃಷ್ಣ ಲೀಲಾಪ್ರಸಂಗ' ಕನ್ನಡದಲ್ಲಿ ಬಂದಿರಲಿಲ್ಲ. ಅದನ್ನೂ ನಿತ್ಯಸ್ಥಾನಂದರು ಅನುವಾದಿಸಿದರು. ಸೋಮನಾಥಾನಂದರಿಗೂ ಮೊದಲು ಸ್ವಾಮಿ ಪ್ರಣವೇಶಾನಂದರು ಅದನ್ನು ಅನುವವಾದಿಸಿದ್ದರು. ಆದರೆ ಅದು ಹೆಚ್ಚು ಪ್ರಚಾರಕ್ಕೆ ಬರಲಿಲ್ಲ.

ನಿತ್ಯಸ್ಥಾನಂದರು ರಾಮಕೃಷ್ಣ ಸಂಘದ ಕನ್ನಡ ಮಾಸಪತ್ರಿಕೆ, 'ವಿವೇಕಪ್ರಭ'ದ ಪ್ರಥಮ ಸಂಪಾದಕರಾಗಿದ್ದರು. ಐದು ವರ್ಷಗಳ ಕಾಲ ಅವರು ಬರೆದ ಸಂಪಾದಕೀಯಗಳು ಮತ್ತು ಲೇಖನಗಳ ಸಂಗ್ರಹವೇ 'ಪರಿಪೂರ್ಣ ವ್ಯಕ್ತಿತ್ವ' ಎಂಬ ನಾನೂರು ಪುಟಗಳ ಉಪಯುಕ್ತ ಪುಸ್ತಕ. ಅದರಲ್ಲಿ ಸಾಧನೆ, ವ್ಯಕ್ತಿತ್ವ ನಿರ್ಮಾಣ, ವೈಚಾರಿಕ ಹಾಗೂ ದಿವ್ಯತ್ರಯರ ಲೇಖನಗಳಿವೆ. ಇವುಗಳಲ್ಲಿ ಕೆಲವು ಕಿರುಪುಸ್ತಕಗಳಾಗಿಯೂ ಪ್ರಕಟವಾಗಿವೆ.

ನಿತ್ಯಸ್ಥಾನಂದರು ಮಾಡಿದ ಶ್ರಮಪೂರಿತ ಕೆಲಸವೆಂದರೆ 'ಸ್ವಾಮಿ ವಿವೇಕಾನಂದ ಕೃತಿಶ್ರೇಣಿ'ಯ ಪರಿಷ್ಕರಣೆ. ಆಗ ಸೋಮನಾಥಾನಂದರು ಅನಾರೋಗ್ಯ ನಿಮಿತ್ತ ನಿವೃತ್ತರಾಗಿ ಮೈಸೂರು ಆಶ್ರಮದಲ್ಲೇ ಇದ್ದರು. ಮೈಸೂರು ಆಶ್ರಮ ಕನ್ನಡ ಪ್ರಕಟಣೆಗಳ ಕೇಂದ್ರವೆಂದು ಬೇಲೂರು ಮಠದಿಂದ ಅಧಿಕೃತ ಘೋಷಣೆ ಆಗಿತ್ತು. ಐವತ್ತು ವರ್ಷಗಳ ಹಿಂದೆ ಸೋಮನಾಥಾನಂದರು ನೆಟ್ಟ ಸಸಿ ವೃಕ್ಷವಾಗಿ ನೂರಾರು ಹೊತ್ತಗೆಗಳು ಪ್ರಕಟವಾಗಿದ್ದುವು. ಯಾವಾಗಲೂ ನಾಲ್ಕೈದು ಪುಸ್ತಕಗಳು ಮುದ್ರಣದಲ್ಲಿರುತ್ತಿದ್ದುವು. ಕರಡಚ್ಚನ್ನು ತಿದ್ದುವುದು ಅವರ ನಿತ್ಯಕರ್ಮವೇ ಆಗಿತ್ತು. ಪ್ರಾರಂಭದ ದಿನಗಳಲ್ಲಿ ಪುಸ್ತಕಗಳ ಭಾಂಗಿಯನ್ನು ಕಟ್ಟುವ ಕೆಲಸವನ್ನೂ ಅವರು ಮಾಡುತ್ತಿದ್ದರು. ಸ್ವಾಮಿ ಗಂಭೀರಾನಂದರು ಹಾಸ್ಯವಾಗಿ ಅವರನ್ನು ಪ್ಯಾಕರ್ ಟು ರೈಟರ್ ಎಂದು ಕರೆಯುತ್ತಿದ್ದರಂತೆ! ಎಷ್ಟು ತಿದ್ದಿದರೂ ಮುದ್ರಣ ದೋಷಗಳು ಇದ್ದೇ ಇರುತ್ತಿದ್ದುವು. ಈಗಿನಂತೆ ಡಿ.ಟಿ.ಪಿ.ಯಂತಹ ಸೌಲಭ್ಯಗಳಿರಲಿಲ್ಲ. ಕೆಲವರು ಮುದ್ರಣ ದೋಷವನ್ನು ಭಾಷೆಯ ದೋಷ ಎಂದು ಪ್ರಚಾರ ಮಾಡಲಾರಂಭಿಸಿದ್ದರು. ಆ ಸಮಯದಲ್ಲಿ ಸ್ವಾಮಿ ನಿತ್ಯಸ್ಥಾನಂದರು ಪ್ರೊ. ಪ್ರಭುಶಂಕರ ಅವರ ನೆರವಿನಿಂದ ದೋಷಗಳನ್ನು ತಿದ್ದಿ ಲೇಖನಗಳ ಕ್ರಮವನ್ನು ಸೂಕ್ತವಾಗಿ ಮಾರ್ಪಾಟು ಮಾಡಿ ಪುಸ್ತಕದ ಅಳತೆಯನ್ನು ಹೆಚ್ಚಿಸಿ ಹತ್ತು ಸಂಪುಟಗಳನ್ನು ಇಂಗ್ಲಿಷ್ ಮೂಲದಂತೆ ಎಂಟಾಗಿ ಪರಿವರ್ತಿಸಿದರು. ಅವರಿಗೂ ಕೂಡ ಕಂಪ್ಯೂಟರ್ ಅನುಕೂಲವಿರಲಿಲ್ಲ. ತಿದ್ದುಪಡಿಯನ್ನು ಕೈಯಿಂದ ಬರೆದುಕೊಳ್ಳುತ್ತಿದ್ದರು. ಅವರು ೨೦೦೫ರಲ್ಲಿ ಮೈಸೂರು ಆಶ್ರಮದ ಅಧ್ಯಕ್ಷರಾದ ನಂತರ ಆಗ ತಾನೆ ಬಿಡುಗಡೆಯಾಗಿದ್ದ ಸ್ವಾಮಿ ವಿವೇಕಾನಂದರ 'Complete Works' ನ ಒಂಭತ್ತನೆ ಸಂಪುಟವನ್ನು ಅನುವಾದಿಸಿ 'ಕೃತಿಶ್ರೇಣಿ'ಗೆ ಸೇರಿಸಿದರು.

ರಾಮಕೃಷ್ಣ ಮಹಾಸಂಘ, ರಾಷ್ಟ್ರಜಾಗೃತಿ (Vivekananda - His Call To the Nation ನ ಅನುವಾದ), ಶಂಕರಾಚಾರ್ಯರ ಸಾಧನಪಂಚಕ – ಮೂಲ ಮತ್ತು ವಿವರಣೆ, ಸೇವೆಯ ಬಗ್ಗೆ ವಿವೇಕಾನಂದರ ವಿಚಾರಧಾರೆಯ ಸಂಗ್ರಹ, ಸೇವೆ ಮುಂತಾದ ಕಿರುಪುಸ್ತಕಗಳನ್ನು ಬರೆದರು. ಬೇಲೂರು ಮಠದಲ್ಲಿ ಪ್ರಾಚಾರ್ಯರಾದ ನಂತರ ಇಂಗ್ಲಿಷ್‌ನಲ್ಲಿ 'The Psychological Aspects of Spiritual Life' ಮತ್ತು ಅದರ ಅನುವಾದ 'ಆಧ್ಯಾತ್ಮಿಕ ಜೀವನದಲ್ಲಿ ಮನೋವಿಶ್ಲೇಷಣೆಯ ಮಹತ್ವ', ಮತ್ತು 'ಭಕ್ತನ ಲಕ್ಷಣ' ಎಂಬ ಭಗವದ್ಗೀತೆಯ ಹನ್ನೆರಡನೆ ಅಧ್ಯಾಯ ಭಕ್ತಿಯೋಗದ ವಿವರಣೆ ಮುಂತಾದ ಪುಸ್ತಕಗಳನ್ನು ಬರೆದರು. ಹೀಗೆ ಸರಳತೆ, ಸಜ್ಜನಿಕೆ ಮತ್ತು ಸಂಕೋಚದ ಸ್ವಭಾವದವರಾದ ಸ್ವಾಮಿ ನಿತ್ಯಸ್ಥಾನಂದರು ಎಲೆ ಮರೆಯ ಕಾಯಿಯಂತೆ ಸಾಹಿತ್ಯ ಸೇವೆ ಮಾಡಿದರು.

### ಸ್ವಾಮಿ ರಾಘವೇಶಾನಂದ

ಸ್ವಾಮಿ ರಾಘವೇಶಾನಂದರು ಅನೇಕ ವರ್ಷಗಳು ತಮಿಳು ನಾಡಿನಲ್ಲಿ ಇದ್ದಾಗ್ಯೂ, ಸರಳವಾಗಿ ಕನ್ನಡದಲ್ಲಿ ಮತ್ತು ಇಂಗ್ಲಿಷ್‌ನಲ್ಲಿ ಅನೇಕ ಪುಸ್ತಕಗಳನ್ನು ಬರೆದಿರುವರು, ವಿಶೇಷವಾಗಿ ಮಕ್ಕಳಿಗಾಗಿ. ಸಚಿತ್ರ ರಾಮಾಯಣ, ಮಹಾಭಾರತ, ಶ್ರೀಕೃಷ್ಣ, ಹನುಮಾನ್, ಶಂಕರಾಚಾರ್ಯ, ಬಾಲ ಭಕ್ತರು, ನೀತಿ ಕಥೆಗಳು, ವಿವೇಕಾನಂದ, ರಾಮಕೃಷ್ಣರ ಕಥೆಗಳು ಮುಂತಾದ ಅನೇಕ ಆಕರ್ಷಕ ಪುಸ್ತಕಗಳನ್ನು ಬರೆದಿದ್ದಾರೆ. ದೊಡ್ಡವರಿಗಾಗಿ 'ಒಬ್ಬೊಬ್ಬರಿಗೂ ಭಗವದ್ಗೀತೆ' ಮತ್ತು 'ದಿವ್ಯತ್ರಯರ ಸಂದೇಶ' – ಇವನ್ನೆಲ್ಲಾ ಸರಳವಾಗಿ ಬರೆದಿದ್ದಾರೆ. ಎಲ್ಲರಿಗೂ ಸರಳವಾಗಿ ತಿಳಿಸುವುದು ಇವರ ಉದ್ದೇಶ. ದಿಟ್ಟವಾಗಿ ಮನಮುಟ್ಟುವಂತೆ ಮಾತನಾಡುವುದೂ ಇವರ ವಿಶೇಷತೆ.

ಈ ಲೇಖನ ಒಂದು ಸಣ್ಣ ಪ್ರಯತ್ನ. ರಾಮಕೃಷ್ಣ –ವಿವೇಕಾನಂದ ಸಾಹಿತ್ಯಕ್ಕೆ ಅನೇಕ ಯತಿಗಳ ಕಾಣಿಕೆ ಇದೆ. ಮಂಗಳೂರಿನಲ್ಲಿ ಅನೇಕ ವರ್ಷಗಳು ಇದ್ದ ಸ್ವಾಮಿ ವಿಜ್ಞಾನಂದರು ೧೯೫೭ರಲ್ಲೇ ವಿಷ್ಣುಸಹಸ್ರನಾಮದ ಅರ್ಥವನ್ನು ಭಾಷ್ಯದೊಂದಿಗೆ ಬರೆದುದು ಮೈಸೂರು ಆಶ್ರಮದಿಂದ ಪ್ರಕಟವಾಗಿದೆ. ಸ್ವಾಮಿ ಭಗವದಾನಂದ ಮತ್ತು ಸ್ವಾಮಿ ಜ್ಞಾನಯೋಗಾನಂದರು ಶ್ರೀಶಾರದಾ ದೇವಿಯರ ಸಮಗ್ರ ಸಂಭಾಷಣೆಗಳನ್ನು ಬಂಗಾಲಿಯ 'ಶ್ರೀಶ್ರೀ ಮಾಯೇರ್ ಕಥಾ'ದಿಂದ ಅನುವಾದಿಸಿದುದು ಮೈಸೂರು ಆಶ್ರಮದಿಂದ ೨೦೧೧ರಲ್ಲಿ 'ಶ್ರೀಶಾರದಾದೇವಿ ವಚನವೇದ' ಎಂಬ ಶೀರ್ಷಿಕೆಯಲ್ಲಿ ಪ್ರಕಟವಾಯಿತು. ಹೀಗೆ ರಾಮಕೃಷ್ಣ–ವಿವೇಕಾನಂದ–ವೇದಾಂತ ಸಾಹಿತ್ಯ ಪಸರಿಸುತ್ತಾ ಜನಮನವನ್ನು ಪ್ರವೇಶಿಸುತ್ತಾ ಭವಜೀವಿಗಳನ್ನು ತನ್ನೆಡೆಗೆ ಸೆಳೆಯುತ್ತಿದೆ. ✽